For more jobnews visit: www.kpscvaani.com

OFFICE OF THE REGISTRAR GENERAL, HIGH COURT OF KARNATAKA
DR. AMBEDKAR VEEDHI, BENGALURU 560 001.

NOTIFICATION NO : HCRB /ACS-4/2020 DATED 03.02.2020
RECRUITMENT OF THE CANDIDATES TO THE POST OF ASSISTANT COURT SECRETARY

LAST DATE FOR SUBMISSION OF APPLICATION THROUGH ONLINE : 04.03.2020

******

It is hereby notified that online applications are invited from the eligible candidates who are qualified as on the last date fixed for submission of applications for direct recruitment of **27 posts** of *Assistant Court Secretary* on the Establishment of the High Court of Karnataka, Bengaluru, through online link on http://karnatakajudiciary.kar.nic.in/recruitment.asp

1. Method of Recruitment :

Selection of candidates will be made in accordance with the High Court of Karnataka Service (Conditions of Service and Recruitment) Rules, 1973, as amended from time to time and the High Court of Karnataka Service (Direct Recruitment by Selection) Rules, 1984, as amended from time to time.

2. Minimum Qualification:

I. SSLC Examination conducted by the Karnataka Secondary Education Examination Board or its equivalent examination.

OR

Diploma in Commercial Practice / Secretarial Practice in English or any other examination recognized as equivalent examination to them by Universities or Karnataka Secondary Education Examination Board or Technical Board

For more jobnews visit: www.kpscvaani.com

Note : Preference will be given to those who are graduates.

II. Senior Grade Examination in English Shorthand in first class.

OR

Proficiency Grade Examination in English Shorthand; and

III. Senior Grade Examination in Typewriting in English conducted by the Department of Public Instruction of the Karnataka Secondary Education Examination Board or equivalent qualification.

IV. Must have Knowledge of Computers.

Note :- Knowledge of operation of computers in this rules means possessing a certificate in computer basics issued by an Institute imparting computer education.

3. Pay Scale: Rs. 44,900/- to Rs.1,42,400/- with admissible allowances as per High Court of Karnataka (Officers & Officials) Revised Pay Rules 2018.

4. Probation: The applicant if appointed shall be initially on probation for a period of two years or for extended period if necessary.

5. Age limit:

(1) As on the last date of submission of online application, the applicants must have attained the age of 18 years in respect of all categories and not attained the age of :

a. 40 years in the case of a person belonging to Scheduled Caste or Scheduled Tribe or Category-I of other Backward Classes.

b. 38 years in the case of a person belonging to Category II-A or II-B or Category III-A or III – B of other Backward Classes; and

c. 35 years in the case of others.

For more jobnews visit: www.kpscvaani.com

(2) Not withstanding anything contained in Rule 6 of the Karnataka Civil Services (General Recruitment) Rules, 1977

i. In the case of an applicant who is working or holding a post under the Government or a local authority or a Corporation established by a State Act or Central Act or established by the Government under a State Act or Central Act and owned or controlled by the Government by the number of years during which he/she is or was holding such post or ten years whichever is less;

ii. In the case of candidate who is an Ex-serviceman – the age is relaxed by three years plus the number of years of service rendered by him in the Armed Forces of the Union;

iii. In the case of a candidate who is Physically Challenged – the age is relaxed by ten years;

iv. In the case of a candidate who is widow – the age is relaxed by ten years;

(3) The minimum and maximum age limit shall be as on the last date fixed for submitting applications through on-line.

6. Classification of vacancies:

22 POSTS UNDER RESIDUAL PARENT CADRE (INCLUDING 20 BACKLOG POSTS)

Category	Unreserved	Women	Rural	Physically Challenged	Ex – Servicemen	Kannada Medium	Displaced from Projects	Total
Scheduled Caste	-	-	1+4*	1*	2*	1*	1*	1+9*
Scheduled Tribe	-	-	1*	-	1*	-	-	2*
Category I	-	-	1*	-	-	-	-	1*
Category IIA	-	-	1*	1*	1*	-	-	3*
Category IIB	-	1*	1*	-	-	-	-	2*
Category IIIA	-	-	1*	-	-	-	-	1*
Category IIIB	-	-	2*	-	-	-	-	2*
General Merit	1	-	-	-	-	-	-	1
TOTAL	1	1*	1+11*	2*	4*	1*	1*	2+20*

*** Indicates Backlog posts.**

For more jobnews visit: www.kpscvaani.com

5 POSTS UNDER LOCAL CADRE (i.e. RESERVATION FOR HYDERABAD KARNATAKA REGION CANDIDATES UNDER ARTICLE 371(J) OF THE CONSTITUTION OF INDIA) (INCLUDING 3 BACKLOG POSTS)

Category	Unreserved	Women	Physically Challenged	Total
Scheduled Caste	1*	1	-	**1+1***
Scheduled Tribe	1*	-	-	**1***
Category - I	1*	-	-	**1***
General Merit	-	-	1	**1**
Total	**3***	**1**	**1**	**2+3***

*** Indicates Backlog posts.**

7. **Mode of Selection :** Selection to the post of Assistant Court Secretary will be made on the basis of performance in the following Tests :

Sl. No.	Particulars	Maximum Marks	Minimum Marks for passing the test
1)	Shorthand & Typing Test	100	60
2)	Viva – voce	20	10
	Grand Total	**120 Marks**	**70 Marks**

Note: As per Rule 5 of High Court of Karnataka of Service (Direct Recruitment by Selection) Rules, 1984 eligible candidates will be called for Shorthand / Typing Test in the ratio of 1:5 as against the number of posts notified in the respective categories.

8. **Method of Application and fee:** The method of Application shall be through online on the website *http://karnatakajudicary.kar.nic.in/recruitment.asp* to be applied as per the instructions made available in the Annexure on the website.

Applications submitted by any other mode other than online will not be considered.

For more jobnews visit: www.kpscvaani.com

(a) The candidates belonging to General Merit and other Backward classes (other than Scheduled Caste / Scheduled Tribe / Category - I and Physically Challenged), candidates, shall pay an Application Fee of Rs. 400/- (Rupees Four Hundred Only) and candidates belonging to Scheduled Caste/ Scheduled Tribe/ Category – I / Physically Challenged, shall pay an application Fee of Rs. 200/- (Rupees Two Hundred Only), prescribed for the post, by any of the following mode of payment.

(i) **Online Payment :** On submission of online application the candidates shall make the online payment of application fee by SBI online payment gateway mentioned in the online application.

OR

(ii) **Challan Form :** On submission of online application, the candidates shall download the challan through the SBI online payment gateway link as mentioned in the online application, in PDF format and shall remit the prescribed fee in any branch of SBI. (System need to support PDF reader-like Adobe Acrobat).

(b) Fee once paid will not be refunded under any circumstances.

9. Last date for submission of application and payment of application fee:-

a) To register / submit online applications: **04.03.2020 till 11.59 PM**

b) For payment of fee through Online: **07.03.2020**

OR

c) For payment through Challan: **07.03.2020** (till Bank's working Hours).

For more jobnews visit: www.kpscvaani.com

10. Candidates Claiming Reservations:

a) Candidates Claiming Reservations under *Scheduled Caste / Scheduled Tribe / Category-I / II A / II B / III A / III B* shall possess the certificate in the form as prescribed by the Government of Karnataka and issued by the competent Authority at the time of submitting online application and produce the same whenever directed by the Authority without fail.

b) Candidates claiming reservation under *Physically Challenged* shall possess the Certificates issued by the Competent Authorities at the time of submitting online application and produce the same whenever directed by the Authority without fail.

c) Candidates claiming reservation under *Ex-servicemen* shall possess the certificate of Release or Discharge from Armed Forces at the time of submitting online application and produce the same whenever directed by the Authority without fail.

d) Candidates claiming reservation under *Kannada Medium quota* shall possess certificate for having studied in Kannada Medium from 1 to 10th standard as prescribed in Notification No. DPAR 71 SRR 2001 dated 24.10.2002, duly signed and sealed by the Head Master of the School and countersigned by the concerned Block Education Officer at the time of submitting online application and produce the same whenever directed by the Authority without fail.

e) Candidates claiming reservation under *Rural quota* should have studied from 1 to 10th Standard in Rural areas. The candidates shall possess Rural Study Certificate in the format prescribed in Government Order No. DPAR 96 SRR 2005 dated 10.08.2005, duly attested by the Headmaster of the school and countersigned by the concerned Block Education Officer *and* General Merit candidate claiming reservation under rural quota shall also possess certificate in Form–I obtained from concerned Tahsildar as per Government Order No. DPAR 8 SRR 2001 dated 13.02.2001,

For more jobnews visit: www.kpscvaani.com

certifying that they do not fall under the creamy layer prescribed by Government of Karnataka at the time of submitting online application and produce the same whenever directed by the Authority without fail.

f) Candidates claiming reservation under *Persons Displaced from Projects* quota shall possess certificate issued by the Competent Authority as per Government of Karnataka Order No. DPAR 23 SRR 1999 dated 23.11.2000 and produce the same whenever directed by the Authority without fail.

g) Candidates claiming reservation under *Local Cadre* shall possess the Eligibility Certificate (Under Article 371(J) issued by the Competent Authority on or before the last day of applying online as prescribed under the Karnataka Public Employment (Reservation in Appointment for Hyderabad-Karnataka Region) (Issue of Eligibility Certificates) Rules, 2013.

h) Candidates who are in service of Union of India / State Governments and their undertaking should possess *"No Objection Certificate"* issued by the concerned Authority while submitting the online applications and furnish at the time of verification of documents.

11. Candidates called for the Document Verification / Shorthand and Typing Test / Viva-Voce shall produce the necessary original documents with regard to Educational Qualification (i.e., SSLC or its equivalent examination certificate for proof of date of birth), English Senior Grade Typing Certificates, English Shorthand Senior or Proficiency Grade, Diploma Certificates in case of candidates possessing Diploma in Commercial Practice, Caste, reservations claiming with regard *to Rural / Physically Challenged / Ex-Servicemen / Kannada Medium /Displaced from projects / Widow and Local Cadre* for verification purpose.

On verification, if the information so furnished by the applicant in the application is found to be false, then his / her candidature is liable for rejection and also he / she is liable for criminal prosecution for furnishing false information.

For more jobnews visit: www.kpscvaani.com

12. The candidate shall furnish three certificates of Character at the time of verification of documents i.e. one issued from the Head of the Institution / College in which he / she last studied with study details and other two certificates from respectable persons not being relative who is well acquainted with him / her.

13. Candidates called for Shorthand and Typing Test / Viva - voce will have to appear for the same at their own cost.

14. The candidates appointed to the post of Assistant Court Secretary are liable to be posted at High Court of Karnataka Principal Bench at Bengaluru or Benches at Dharwad and Kalaburagi.

15. If any applicant attempts to obtain extraneous support by any means for candidature from any officials or non-officials, he/she will not be eligible for appointment.

BY ORDER OF HON'BLE THE CHIEF JUSTICE,

(RAJENDRA BADAMIKAR),
REGISTRAR GENERAL
HIGH COURT OF KARNATAKA
BENGALURU - 560001

For more jobnews visit: www.kpscvaani.com

ಮಹಾವಿಲೇಖನಾಧಿಕಾರಿಯವರ ಕಛೇರಿ, ಕರ್ನಾಟಕ ಉಚ್ಚ ನ್ಯಾಯಾಲಯ,
ಡಾ. ಅಂಬೇಡ್ಕರ್ ವೀದಿ, ಬೆಂಗಳೂರು-560 001

ಅಧಿಸೂಚನೆ ಸಂಖ್ಯೆ ಹೆಚ್.ಸಿ.ಆರ್.ಬಿ./ಎ.ಸಿ.ಎಸ್-4/2020 ದಿನಾಂಕ 03.02.2020

ಅಸಿಸ್ಟೆಂಟ್ ಕೋರ್ಟ್ ಸೆಕ್ರೆಟರಿ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇಮಕಾತಿ
ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 04.03.2020

******

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ, 27 ಅಸಿಸ್ಟೆಂಟ್ ಕೋರ್ಟ್ ಸೆಕ್ರೆಟರಿ ಹುದ್ದೆಗಳಿಗೆ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್ ***http://karnatakajudiciary.kar.nic.in/recruitment.asp*** ಮೂಲಕ ಸಲ್ಲಿಸಬಹುದು.

1. <u>ನೇಮಕಾತಿಯ ವಿಧಾನ :</u>

ಅಭ್ಯರ್ಥಿಗಳ ಆಯ್ಕೆಯನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂಥ ಕರ್ನಾಟಕ ಉಚ್ಚ ನ್ಯಾಯಾಲಯ ಸೇವೆ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973 ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂಥ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984 ಇವುಗಳ ಅನುಸಾರವಾಗಿ ಮಾಡಲಾಗುವುದು.

2. <u>ಕನಿಷ್ಠ ವಿದ್ಯಾರ್ಹತೆ :</u>

1. ಅಭ್ಯರ್ಥಿಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ನಡೆಸಲಾಗುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಅಥವಾ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಥವಾ ಟೆಕ್ನಿಕಲ್ ಬೋರ್ಡ್ (ತಾಂತ್ರಿಕ ಮಂಡಳಿ) ನಡೆಸುವ ಆಂಗ್ಲ ಕರ್ಮಷಿಯಲ್ ಪ್ರಾಕ್ಟೀಸ್ / ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಡಿಪ್ಲೋಮದಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು

ಟಿಪ್ಪಣಿ : ಪದವಿ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು

For more jobnews visit: www.kpscvaani.com

2. ಆಂಗ್ಲ ಶೀಘ್ರಲಿಪಿ ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.

ಅಥವಾ

ಪ್ರೊಫೆಶಿಯನ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

3. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಆಂಗ್ಲ ಪ್ರೌಢ ದರ್ಜೆ ಬೆರಳಚ್ಚು ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

4. ಕಂಪ್ಯೂಟರ್ ನಿರ್ವಹಣಾ ಜ್ಞಾನ ಹೊಂದಿರಬೇಕು.

ಟಿಪ್ಪಣಿ : ಕಂಪ್ಯೂಟರ್ ನಿರ್ವಹಣಾ ಜ್ಞಾನ ಎಂದರೆ ಕಂಪ್ಯೂಟರ್ ಶಿಕ್ಷಣ ನೀಡುವ ಸಂಸ್ಥೆಯು ಪ್ರಧಾನ ಮಾಡುವ ಕಂಪ್ಯೂಟರ್ ಬೇಸಿಕ್ಸ್ ಕೋರ್ಸಿನ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

3. <u>ಪರಿಷ್ಕೃತ ವೇತನ ಶ್ರೇಣಿ</u> : ರೂ. 44,900 ರಿಂದ 1,42,400 ಕರ್ನಾಟಕ ಉಚ್ಚ ನ್ಯಾಯಾಲಯದ (ಅಧಿಕಾರಿ / ನೌಕರರ) ಪರಿಷ್ಕೃತ ವೇತನ ಶ್ರೇಣಿ ನಿಯಮ 2018 ಅನುಸಾರ ಇತರೆ ಭತ್ಯೆಗಳು.

4. <u>ಸೇವೆಯ ಪರಿವೀಕ್ಷಣಾ ಅವಧಿ</u> : ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

5. <u>ವಯೋಮಿತಿ:</u>

(1) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದಂದು ಎಲ್ಲಾ ಪ್ರವರ್ಗದವರಿಗೆ ಕನಿಷ್ಠ 18 ವರ್ಷದವರಾಗಿರಬೇಕು ಮತ್ತು ಗರಿಷ್ಠ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು.

(ಎ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೇ ಹಿಂದುಳಿದ ಜಾತಿಗಳ ಪ್ರವರ್ಗ-1ಕ್ಕೆ ಸೇರಿದ ಪಕ್ಷದಲ್ಲಿ ಅವರು ಗರಿಷ್ಠ 40 ವರ್ಷ ವಯಸ್ಸು ಮೀರಿರಬಾರದು.

(ಬಿ) ಇತರೇ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಅಥವಾ '2ಬಿ' ಅಥವಾ '3ಎ' ಅಥವಾ '3ಬಿ'ಗೆ ಸೇರಿದ್ದಲ್ಲಿ ಗರಿಷ್ಠ 38 ವರ್ಷ ವಯಸ್ಸು ಮೀರಿರಬಾರದು; ಮತ್ತು

(ಸಿ) ಇತರೇ ಅಭ್ಯರ್ಥಿಗಳು 35 ವರ್ಷ ವಯಸ್ಸು ಮೀರಿರಬಾರದು.

(2) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ 6ನೇ ನಿಯಮದ ಅನುಸಾರ ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ

For more jobnews visit: www.kpscvaani.com

ನಿಗದಿಪಡಿಸಿರುವ ಗರಿಷ್ಟ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

(i) ಅಭ್ಯರ್ಥಿಯು, ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಅಥವಾ ಕೇಂದ್ರ ಅಧಿನಿಯಮದಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು ಸರ್ಕಾರದ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ ಹುದ್ದೆಯನ್ನು ಹೊಂದಿದ್ದಲ್ಲಿ ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿಯ ಸಡಿಲಿಕೆಗೆ ಅರ್ಹರಾಗಿರುತ್ತಾರೆ.

(ii) ಮಾಜಿ ಸೈನಿಕರಿಗೆ, ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ ಮೂರು ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

(iii) ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

(iv) ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

(3) ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ.

6. <u>ಖಾಲಿ ಹುದ್ದೆಗಳ ವರ್ಗೀಕರಣ</u> :

ಉಳಿದ ಮೂಲವೃಂದದ 22 ಹುದ್ದೆಗಳು (20 ಬ್ಯಾಕ್‌ಲಾಗ್ ಹುದ್ದೆಗಳನ್ನೊಳಗೊಂಡು)

ಪ್ರವರ್ಗ	ಸಾಮಾನ್ಯ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗವಿಕಲರು	ಮಾಜಿ ಸೈನಿಕ	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ಒಟ್ಟು
ಪರಿಶಿಷ್ಟ ಜಾತಿ	–	–	1+4*	1*	2*	1*	1*	1+9*
ಪರಿಶಿಷ್ಟ ಪಂಗಡ	–	–	1*	–	1*	–	–	2*
ಪ್ರವರ್ಗ–I	–	–	1*	–	–	–	–	1*
ಪ್ರವರ್ಗ – II(ಎ)	–	–	1*	1*	1*	–	–	3*
ಪ್ರವರ್ಗ – II(ಬಿ)	–	1*	1*	–	–	–	–	2*
ಪ್ರವರ್ಗ – III(ಎ)	–	–	1*	–	–	–	–	1*
ಪ್ರವರ್ಗ – III(ಬಿ)	–	–	2*	–	–	–	–	2*
ಸಾಮಾನ್ಯ	1	–	–	–	–	–	–	1
ಒಟ್ಟು	1	1*	1+11*	2*	4*	1*	1*	2+20*

* ಚಿಹ್ನೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.

For more jobnews visit: www.kpscvaani.com

ಸ್ಥಳೀಯ ವ್ಯಂದಗಳ ೦೮ ಹುದ್ದೆಗಳು (ಅಂದರೆ ಸಂವಿಧಾನದ 371-(ಜೆ) ಅನುಚ್ಛೇದದಡಿಯಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾತಿ)
(೦3 ಬ್ಯಾಕ್‌ಲಾಗ್ ಹುದ್ದೆಗಳನ್ನೊಳಗೊಂಡು)

ಪ್ರವರ್ಗ	ಸಾಮಾನ್ಯ	ಮಹಿಳಾ ಅಭ್ಯರ್ಥಿ	ಅಂಗವಿಕಲರು	ಒಟ್ಟು
ಪರಿಶಿಷ್ಟ ಜಾತಿ	1*	1	–	1+1*
ಪರಿಶಿಷ್ಟ ಪಂಗಡ	1*	–	–	1*
ಪ್ರವರ್ಗ – I	1*	–	–	1*
ಸಾಮಾನ್ಯ	–	–	1	1
ಒಟ್ಟು	3*	1	1	2+3*

* ಚಿಹ್ನೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.

7. <u>ಆಯ್ಕೆ ವಿಧಾನ</u> : ಅಸಿಸ್ಟೆಂಟ್ ಕೋರ್ಟ್ ಸೆಕ್ರೆಟರಿ ಹುದ್ದೆಯ ಆಯ್ಕೆಯನ್ನು ಈ ಮುಂದಿನ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ತೋರಿಸಿದ ಸಾಮರ್ಥ್ಯದ ಆಧಾರದ ಮೇಲೆ ಮಾಡಲಾಗುತ್ತದೆ.

ಕ್ರಮ ಸಂಖ್ಯೆ	ವಿವರಗಳು	ಗರಿಷ್ಠ ಅಂಕಗಳು	ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು
1	ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆ	100	60
2	ಮೌಖಿಕ ಪರೀಕ್ಷೆ	20	10
	ಒಟ್ಟು	120	70

ಸೂಚನೆ : ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ ನಿಯಮ ೮ರ ಅನುಸಾರ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984 ರ ಪ್ರಕಾರ ಆಯಾ ಪ್ರವರ್ಗದ ಅಭ್ಯರ್ಥಿಗಳನ್ನು 1:5 ಅನುಪಾತದಲ್ಲಿ ಅರ್ಹತೆಯ ಆಧಾರದ ಮೇರೆಗೆ ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಗೆ ಕರೆಯಲಾಗುವುದು.

8. <u>ಅರ್ಜಿ ಮತ್ತು ಶುಲ್ಕವನ್ನು ಸಲ್ಲಿಸುವ ವಿಧಾನ</u> : ಅರ್ಜಿಯನ್ನು ಸಲ್ಲಿಸುವ ವಿಧಾನವು ವೆಬ್‌ಸೈಟ್‌ನ ಅನುಬಂಧದಲ್ಲಿ ಲಭ್ಯವಿರುವ ಮಾಹಿತಿಗಳಿಗೆ ಅನುಸಾರವಾಗಿ ಇರತಕ್ಕದ್ದು. ಈ ಮುಂದಿನ ವೆಬ್‌ಸೈಟ್‌ನ ***http://karnatakajudiciary.kar.nic.in/recruitment.asp*** ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

For more jobnews visit: www.kpscvaani.com

ಆನ್‌ಲೈನ್ ಮೂಲಕವಲ್ಲದೆ ಇತರೆ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(ಎ) ಸಾಮಾನ್ಯ ವರ್ಗದ ಅಭ್ಯರ್ಥಿಗಳು ಹಾಗೂ ಇತರೆ ಪ್ರವರ್ಗದ ಅಭ್ಯರ್ಥಿಗಳು, II-ಎ / II-ಬಿ / III-ಎ / III-ಬಿ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದಂತೆ ನಿಗದಿ ಪಡಿಸಿದ ರೂ. 400/- (ನಾಲ್ಕು ನೂರು ರೂಪಾಯಿಗಳು ಮಾತ್ರ) ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-I ಕ್ಕೆ ಸೇರಿದ ಹಾಗೂ ದೈಹಿಕ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ರೂ. 200/- (ಎರಡು ನೂರು ರೂಪಾಯಿಗಳು ಮಾತ್ರ) ಅರ್ಜಿ ಶುಲ್ಕವನ್ನು, ಈ ಮುಂದಿನ ಯಾವುದೇ ವಿಧಾನಗಳ ಮೂಲಕ ಸಂದಾಯ/ ಪಾವತಿ ಮಾಡತಕ್ಕದು.

(i) ಆನ್‌ಲೈನ್ ಮೂಲಕ ಶುಲ್ಕ ಸಂದಾಯ : ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

ಅಥವಾ

(ii)ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ : ಅಭ್ಯರ್ಥಿಗಳು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಪಿ.ಡಿ.ಎಫ್ ನಮೂನೆಯಲ್ಲಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. (ನೀವು ಉಪಯೋಗಿಸುವ ಕಂಪ್ಯೂಟರ್ ಪಿ.ಡಿ.ಎಫ್ ಅಡೋಬ್-ರೀಡರ್, ಅಕ್ರೋಬ್ಯಾಟ್ ಸಪೋರ್ಟ್ ಹೊಂದಿರತಕ್ಕದ್ದು)

(ಬಿ) ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.

9. <u>ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ</u> :

ಎ) ಆನ್‌ಲೈನ್ ಮೂಲಕ ನೊಂದಣಿಗಾಗಿ ಮತ್ತು ಅರ್ಜಿಯನ್ನು ಸಲ್ಲಿಸುವುದಕ್ಕಾಗಿ 04.03.2020 ರಾತ್ರಿ 11.59 ರವರೆಗೆ)

ಬಿ) ಆನ್‌ಲೈನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ 07.03.2020

ಅಥವಾ

ಸಿ) ಚಲನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ 07.03.2020 (ಬ್ಯಾಂಕ್‌ಗಳ ಕೆಲಸದ ವೇಳೆಯಲ್ಲಿ)

For more jobnews visit: www.kpscvaani.com

10. <u>ಮೀಸಲಾತಿ ಕೋರುವ ಅಭ್ಯರ್ಥಿಗಳು :</u>

ಎ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ-I / II ಎ / II ಬಿ / III ಎ / III ಬಿ ಅಡಿಯಲ್ಲಿ ಮೀಸಲಾತಿಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರವನ್ನು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸುವುದು.

ಬಿ) ವಿಕಲಚೇತನ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರವನ್ನು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸುವುದು.

ಸಿ) ಮಾಜಿ ಸೈನಿಕ ವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಮಿಲಿಟರಿ ಸೇವೆಯಿಂದ ಬಿಡುಗಡೆ ಮಾಡಲಾದ ಅಥವಾ ವಿಮುಕ್ತಿಗೊಳಿಸಿದ ಪ್ರಮಾಣಪತ್ರವನ್ನು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸುವುದು.

ಡಿ) ಕನ್ನಡ ಮಾಧ್ಯಮದ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು 1 ರಿಂದ 10ನೇ ತರಗತಿಯವರೆಗೆ ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೆನೆನಿ 2001 ದಿನಾಂಕ 24.10.2002 ರನ್ವಯ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲುರುಜು ಹೊಂದಿರುವ ಪ್ರಮಾಣ ಪತ್ರವನ್ನು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸುವುದು.

ಇ) ಗ್ರಾಮೀಣ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು 1 ರಿಂದ 10ನೇ ತರಗತಿಯವರೆಗೆ ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರತಕ್ಕದು. ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 96 ಸೆನೆನಿ 2005 ದಿನಾಂಕ 10.08.2005 ರನ್ವಯ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲುರುಜುವಿನೊಂದಿಗೆ ನಿಗದಿ ಪಡಿಸಿದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಮತ್ತು ಗ್ರಾಮೀಣ ಮೀಸಲಾತಿಯಡಿಯಲ್ಲಿ ಅರ್ಜಿ ಸಲ್ಲಿಸುವಂತಹ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 8 ಸೆನೆನಿ 2001 ದಿನಾಂಕ 13.02.2001 ರನ್ವಯ ನಮೂನೆ-1 ರಂತೆ ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರವನ್ನು ಸಹ ಆನ್‌ಲೈನ್ ಅರ್ಜಿ ಸಲ್ಲಿಸುವ ಸಮಯಕ್ಕೆ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸುವುದು.

For more jobnews visit: www.kpscvaani.com

ಎಫ್) ಯೋಜನಾ ನಿರಾಶ್ರಿತರು ಅಡಿಯಲ್ಲಿ ಮೀಸಲಾತಿಯನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿದ ಪ್ರಮಾಣಪತ್ರವನ್ನು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೆ ಹಾಜರು ಪಡಿಸುವುದು.

ಜಿ) ಸ್ಥಳೀಯ ವೃಂದ (ಅನುಚ್ಛೇದ 371-ಜೆ ಅಡಿಯಲ್ಲಿನ ಹೈದರಾಬಾದ್-ಕರ್ನಾಟಕ ಪ್ರದೇಶ)ದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶ- ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರ ಅಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಯುಕ್ತ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

ಎಚ್) ಕೇಂದ್ರ ಸರ್ಕಾರ /ರಾಜ್ಯ ಸರ್ಕಾರ ಮತ್ತು ಅವುಗಳ ಅಧೀನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರವು ನೀಡಿರುವ "ನಿರಾಕ್ಷೇಪಣಾ ಪ್ರಮಾಣ ಪತ್ರ"ಗಳನ್ನು ಹೊಂದಿರತಕ್ಕದ್ದು. ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಮತ್ತು ನಂತರದ ಪರಿಶೀಲನೆಗಳ ಸಮಯದಲ್ಲಿ ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

11. ದಾಖಲೆಗಳ ಪರಿಶೀಲನೆ/ಪರೀಕ್ಷೆಗೆ ಸಂಬಂಧಿಸಿದಂತೆ ಕರೆಯಲಾದ ಅಭ್ಯರ್ಥಿಗಳು ಪರಿಶೀಲನೆಗಾಗಿ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ, ಹುಟ್ಟಿದ ದಿನಾಂಕಗಳಿಗೆ ಸಂಬಂಧಿಸಿದ ಅವಶ್ಯಕ ಮೂಲ ದಾಖಲೆಗಳನ್ನು ಮತ್ತು ಗ್ರಾಮೀಣ/ ಅಂಗವಿಕಲ / ಮಾಜಿ ಸೈನಿಕ/ ಕನ್ನಡ ಮಾಧ್ಯಮ/ಯೋಜನಾ ನಿರಾಶ್ರಿತರು/ವಿಧವೆ ಮತ್ತು ಸ್ಥಳೀಯ ವೃಂದಕ್ಕಾಗಿ ಮೀಸಲಾತಿಯನ್ನು ಕೋರುವವರು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.

ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಆತನ/ ಆಕೆಯ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ಧ ತಪ್ಪು ಮಾಹಿತಿಯನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.

12. ಅಭ್ಯರ್ಥಿಯು ಉತ್ತಮ ನಡತೆಯ ಒಂದು (ಅವನು/ಅವಳು ಓದಿದ ಸಂಸ್ಥೆ/ಕಾಲೇಜಿನ ಪ್ರಾಂಶುಪಾಲರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಮತ್ತು ಅವನು/ಅವಳು ಚೆನ್ನಾಗಿ ಪರಿಚಯವಿರುವ ಹಾಗೂ ಸಂಬಂಧಿಯಾಗಿರದ ಎರಡು ಗೌರವಾನ್ವಿತ ವ್ಯಕ್ತಿಯಿಂದ ಪಡೆದ ಇನ್ನೊಂದು) ಪ್ರಮಾಣಪತ್ರಗಳನ್ನು ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಹಾಜರುಮಾಡತಕ್ಕದ್ದು.

13. ಶೀಘ್ರಲಿಪಿ ಮತ್ತು ಬೆರಳಚ್ಚು ಪರೀಕ್ಷೆಗೆ / ಮೌಖಿಕ ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

For more jobnews visit: www.kpscvaani.com

14. ಅಸಿಸ್ಟಂಟ್ ಕೋರ್ಟ್ ಸೆಕ್ರೆಟರಿ ಹುದ್ದೆಗೆ ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಬಹುದು.

15. ಅಭ್ಯರ್ಥಿಗಳು ಅಭ್ಯರ್ಥಿಕೆಯ ಸಂಬಂಧದಲ್ಲಿ ಸಿಬ್ಬಂದಿ ಅಥವಾ ಸಿಬ್ಬಂದಿಯೇತರ ಮೂಲಗಳ ಮೂಲಕ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಆದೇಶಾನುಸಾರ,

(ರಾಜೇಂದ್ರ ಬಾದಾಮಿಕರ್)
ಮಹಾವಿಲೇಖನಾಧಿಕಾರಿ
ಕರ್ನಾಟಕ ಉಚ್ಚ ನ್ಯಾಯಾಲಯ
ಬೆಂಗಳೂರು – ೫೬೦೦೦೧